"ಮಧುರ ಮಕ್ಕಳೇ- ತಂದೆಯು ನೀವು ಮಕ್ಕಳಿಗೆ ದುಃಖಧಾಮದ ಸನ್ಯಾಸ ಮಾಡಿಸಲು ಬಂದಿದ್ದಾರೆ, ಇದೇ ಬೇಹದ್ದಿನ ಸನ್ಯಾಸವಾಗಿದೆ"

ಪ್ರಶ್ನೆ: ಆ ಸನ್ಯಾಸಿಗಳ ಸನ್ಯಾಸದಲ್ಲಿ ಮತ್ತು ನಿಮ್ಮ ಸನ್ಯಾಸದಲ್ಲಿ ಮುಖ್ಯವಾದ ಅಂತರವೇನು?

ಉತ್ತರ: ಆ ಸನ್ಯಾಸಿಗಳು ಮನೆ-ಮಠವನ್ನು ಬಿಟ್ಟು ಕಾಡಿನಲ್ಲಿ ಹೋಗುತ್ತಾರೆ ಆದರೆ ನೀವು ಮನೆ-ಮಠ ಬಿಟ್ಟು ಕಾಡಿನಲ್ಲಿ ಹೋಗುವುದಿಲ್ಲ. ಮನೆಯಲ್ಲಿ ಇರುತ್ತಲೇ ಇಡೀ ಪ್ರಪಂಚ ಮುಳ್ಳಿನ ಕಾಡಾಗಿದೆ ಎಂದು ತಿಳಿದುಕೊಳ್ಳುತ್ತೀರಿ. ನೀವು ಬುದ್ಧಿಯಿಂದ ಇಡೀ ಪ್ರಪಂಚದ ಸನ್ಯಾಸ ಮಾಡುತ್ತೀರಿ.

ಓಂ ಶಾಂತಿ. ಆತ್ಮೀಯ ತಂದೆಯು ಕುಳಿತು ಆತ್ಮೀಯ ಮಕ್ಕಳಿಗೆ ತಿಳುವಳಿಕೆಯನ್ನು ನೀಡುತ್ತಾರೆ ಏಕೆಂದರೆ ಅರ್ಧಕಲ್ಪದಿಂದ ತಿಳುವಳಿಕೆಹೀನರಾಗಿದ್ದೀರಲ್ಲವೆ ಆದ್ದರಿಂದ ನಿತ್ಯವೂ ತಿಳುವಳಿಕೆ ನೀಡಬೇಕಾಗುತ್ತದೆ. ಮೊಟ್ಟಮೊದಲು ಮನುಷ್ಯರಿಗೆ ಶಾಂತಿ ಬೇಕಾಗಿದೆ. ಮೂಲತಃ ಆತ್ಮರು ಶಾಂತಿಧಾಮದಲ್ಲಿ ಇರುವವರು. ತಂದೆಯು ಸದಾಕಾಲ ಶಾಂತಿಯ ಸಾಗರನಾಗಿಯೇ ಇದ್ದಾರೆ. ಈಗ ಶಾಂತಿಯ ಆಸ್ತಿಯನ್ನು ಪ್ರಾಪ್ತಿ ಮಾಡಿಕೊಳ್ಳುತ್ತಿದ್ದೀರಿ. ಶಾಂತಿದೇವ ಎಂದು ಹೇಳುತ್ತಾರಲ್ಲವೆ ಅರ್ಥಾತ್ ನಮ್ಮನ್ನು ಈ ಸೃಷ್ಟಿಯಿಂದ ತನ್ನ ಮನೆ ಶಾಂತಿಧಾಮದಲ್ಲಿ ಕರೆದುಕೊಂಡು ಹೋಗಿ ಅಥವಾ ಶಾಂತಿಯ ಆಸ್ತಿಯನ್ನು ನೀಡಿ ಎಂದು ಕೇಳಿಕೊಳ್ಳುತ್ತಾರೆ. ದೇವತೆಗಳ ಮುಂದೆ ಅಥವಾ ಶಿವತಂದೆಯ ಮುಂದೆ ಹೋಗಿ ಶಾಂತಿಯನ್ನು ನೀಡಿ ಎಂದು ಕೇಳಿಕೊಳ್ಳುತ್ತಾರೆ ಏಕೆಂದರೆ ಶಿವತಂದೆಯು ಶಾಂತಿಯ ಸಾಗನಾಗಿದ್ದಾರೆ. ನೀವು ಶಿವತಂದೆಯಿಂದ ಈಗ ಶಾಂತಿಯ ಆಸ್ತಿಯನ್ನು ಪಡೆಯುತ್ತಿದ್ದೀರಿ. ತಂದೆಯನ್ನು ನೆನಪು ಮಾಡುತ್ತಾ-ಮಾಡುತ್ತಾ ನೀವು ಶಾಂತಿಧಾಮದಲ್ಲಿ ಅವಶ್ಯವಾಗಿ ಹೋಗಬೇಕಾಗಿದೆ. ನೆನಪು ಮಾಡಲಿಲ್ಲವೆಂದರೂ ಸಹ ಅವಶ್ಯವಾಗಿ ಹೋಗುತ್ತೀರಿ. ಪಾಪದ ಹೊರೆ ತಲೆಯ ಮೇಲೆ ಇರುವುದನ್ನು ಸಮಾಪ್ತಿ ಮಾಡಿಕೊಳ್ಳಲು ನೆನಪು ಮಾಡುತ್ತೀರಿ. ಶಾಂತಿ ಮತ್ತು ಸುಖ ಒಬ್ಬ ತಂದೆಯಿಂದ ಸಿಗುತ್ತದೆ ಏಕೆಂದರೆ ಅವರು ಸುಖ ಮತ್ತು ಶಾಂತಿಯ ಸಾಗರನಾಗಿದ್ದಾರೆ. ಸುಖ-ಶಾಂತಿಯೇ ಮುಖ್ಯವಾಗಿದೆ. ಶಾಂತಿಯನ್ನು ಮುಕ್ತಿ ಎಂದೂ ಸಹ ಹೇಳುತ್ತಾರೆ. ಜೀವನ್ಮುಕ್ತಿ ಮತ್ತು ಜೀವನಬಂಧನವೂ ಆಗಿದೆ. ಈಗ ನೀವು ಜೀವನಬಂಧನದಿಂದ ಜೀವನ್ಮುಕ್ತರಾಗುತ್ತಾ ಇದ್ದೀರಿ. ಸತ್ಯಯುಗದಲ್ಲಿ ಯಾವುದೇ ಬಂಧನವಿರುವುದಿಲ್ಲ. ಸಹಜ ಜೀವನ್ಮುಕ್ತಿ, ಸಹಜ ಗತಿ-ಸದ್ಗತಿ ಎಂದು ಗಾಯನ ಮಾಡಲಾಗುತ್ತದೆ. ಈಗ ಇವೆರಡರ ಅರ್ಥವನ್ನು ನೀವು ಮಕ್ಕಳು ತಿಳಿದುಕೊಂಡಿದ್ದೀರಿ. ಗತಿ ಎಂದು ಶಾಂತಿಧಾಮಕ್ಕೆ, ಸದ್ಗತಿ ಎಂದು ಸುಖಧಾಮಕ್ಕೆ ಕರೆಯಲಾಗುತ್ತದೆ. ಸುಖಧಾಮ, ಶಾಂತಿಧಾಮ ಮತ್ತೆ ಇದು ದುಃಖಧಾಮ, ಇಲ್ಲಿ ನೀವು ಕುಳಿತಿದ್ದೀರಿ. ತಂದೆಯು ತಿಳಿಸುತ್ತಾರೆ- ಮಕ್ಕಳೇ, ಶಾಂತಿಧಾಮವನ್ನು ನೆನಪು ಮಾಡಿ. ಮಕ್ಕಳಿಗೆ ತಮ್ಮ ಮನೆಯ ನೆನಪು ಮರೆತುಹೋಗಿದೆ. ತಂದೆಯು ಬಂದು ನೆನಪನ್ನು ತರಿಸುತ್ತಾರೆ. ನೆನಪಿನಿಂದ ನಿಮ್ಮ ಪಾಪವೆಲ್ಲವೂ ಭಸ್ಮವಾಗಿಬಿಡುತ್ತದೆ. ಆತ್ಮವು ಪವಿತ್ರವಾಗಿ ಮತ್ತೆ ತನ್ನ ಮನೆಗೆ ಹೋಗುತ್ತದೆ. ಇದು ಅಪವಿತ್ರ ಪ್ರಪಂಚವಾಗಿದೆ ಎಂದು ನೀವು ಮಕ್ಕಳಿಗೆ ಗೊತ್ತಿದೆ. ಇಲ್ಲಿ ಒಬ್ಬರೂ ಪವಿತ್ರ ಮನುಷ್ಯರಿಲ್ಲ. ಪವಿತ್ರ ಪ್ರಪಂಚಕ್ಕೆ ಸತ್ಯಯುಗ, ಅಪವಿತ್ರ ಪ್ರಪಂಚಕ್ಕೆ ಕಲಿಯುಗವೆಂದು ಕರೆಯಲಾಗುತ್ತದೆ. ರಾಮರಾಜ್ಯ ಮತ್ತು ರಾವಣರಾಜ್ಯ, ರಾವಣರಾಜ್ಯದಿಂದ ಅಪವಿತ್ರ ಪ್ರಪಂಚದ ಸ್ಥಾಪನೆ ಆಯಿತು. ಇದು ಮಾಡಿ-ಮಾಡಲ್ಪಟ್ಟಂತಹ ಆಟವಾಗಿದೆ. ಬೇಹದ್ದಿನ ತಂದೆಯು ಇದನ್ನು ತಿಳಿಸುತ್ತಿದ್ದಾರೆ ಅವರಿಗೆ ಸತ್ಯವೆಂದು ಕರೆಯಲಾಗುತ್ತದೆ. ಸತ್ಯವಾದ ಮಾತುಗಳನ್ನು ನೀವು ಸಂಗಮಯುಗದಲ್ಲಿಯೇ ಕೇಳುತ್ತೀರಿ ಮತ್ತೆ ನೀವು ಸತ್ಯಯುಗದಲ್ಲಿ ಹೋಗುತ್ತೀರಿ. ದ್ವಾಪರಯುಗದಿಂದ ಮತ್ತೆ ರಾವಣರಾಜ್ಯ ಪ್ರಾರಂಭವಾಗುತ್ತದೆ. ರಾವಣ ಅರ್ಥಾತ್ ಅಸುರ, ಅಸುರರು ಎಂದೂ ಸಹ ಸತ್ಯವನ್ನು ಹೇಳುವುದಿಲ್ಲ ಆದ್ದರಿಂದ ಸುಳ್ಳುಮಾಯೆ, ಸುಳ್ಳುಕಾಯ ಎಂದು ಹೇಳಲಾಗುತ್ತದೆ. ಆತ್ಮಗಳೂ ಸಹ ಸುಳ್ಳು ಅಂದಮೇಲೆ ಶರೀರವೂ ಅಸತ್ಯವಾಗಿದೆ. ಆತ್ಮದಲ್ಲಿಯೇ ಸಂಸ್ಕಾರ ತುಂಬಲ್ಪಡುತ್ತದೆ. ನಾಲ್ಕುಧಾತುಗಳು ಇದೆಯಲ್ಲವೆ- ಚಿನ್ನ, ಬೆಳ್ಳಿ, ಹಿತ್ತಾಳೆ, ಲೋಹ ಇತ್ಯಾದಿಗಳು. ಎಲ್ಲಾ ತುಕ್ಕು ಬಿಟ್ಟುಹೋಗುತ್ತದೆ. ಬಾಕಿ ಯೋಗಬಲದಿಂದ ನೀವು ಸತ್ಯವಾದ ಚಿನ್ನವಾಗುತ್ತೀರಿ. ನೀವು ಸತ್ಯಯುಗದಲ್ಲಿದ್ದಾಗ ಸತ್ಯವಾದ ಚಿನ್ನವಾಗಿರುತ್ತೀರಿ. ನಂತರ ಬೆಳ್ಳಿಯ ಮಿಶ್ರಣವಾದಾಗ ಚಂದ್ರವಂಶದವರೆಂದು ಕರೆಯಲಾಗುತ್ತದೆ. ನಂತರ ತಾಮ್ರದ ಮಿಶ್ರಣ, ಅನಂತರ ಲೋಹದ ಮಿಶ್ರಣ ದ್ವಾಪರ-ಕಲಿಯುಗದಲ್ಲಿ ಸೇರಲ್ಪಡುತ್ತದೆ ನಂತರ ಯೋಗಬಲದಿಂದ ನಿಮ್ಮಲ್ಲಿ ಯಾವುದೇ ಬೆಳ್ಳಿ, ತಾಮ್ರ, ಲೋಹದ ತುಕ್ಕು ಬಿಟ್ಟುಹೋಗುತ್ತದೆ. ಮೊದಲು ನೀವು ಎಲ್ಲಾ ಆತ್ಮರು ಶಾಂತಿಧಾಮದಲ್ಲಿ ಇರುತ್ತೀರಿ ನಂತರ ಮೊದಲು ಸತ್ಯಯುಗದಲ್ಲಿ ಬರುತ್ತೀರಿ ಅದಕ್ಕೆ ಸ್ವರ್ಣಿಮಯುಗವೆಂದು ಕರೆಯಲಾಗುತ್ತದೆ. ನೀವು ಸತ್ಯವಾದ ಚಿನ್ನವಾಗುತ್ತೀರಿ. ಯೋಗಬಲದಿಂದ ಎಲ್ಲಾ ತುಕ್ಕು ಬಿಟ್ಟುಹೋದಾಗ ಬಾಕಿ ಚೊಕ್ಕ (ಅಪರಂಜಿ) ಚಿನ್ನ ಮಾತ್ರ ಉಳಿದಿರುತ್ತದೆ. ಶಾಂತಿಧಾಮಕ್ಕೆ ಸ್ವರ್ಣಿಮಯುಗವೆಂದು ಕರೆಯಲಾಗುವುದಿಲ್ಲ. ಇಲ್ಲಿಯೇ ಸ್ವರ್ಣಿಮಯುಗ, ಬೆಳ್ಳಿಯುಗ, ತಾಮ್ರದಯುಗ ಎಂದು ಕರೆಯಲಾಗುತ್ತದೆ. ಶಾಂತಿಧಾಮದಲ್ಲಿ ಶಾಂತಿ ಇರುತ್ತದೆ. ಆತ್ಮ ಯಾವಾಗ ಶರೀರವನ್ನು ತೆಗೆದುಕೊಳ್ಳುತ್ತದೆ ಆಗ ಸ್ವರ್ಣಿಮಯುಗವೆಂದು ಕರೆಯಲಾಗುತ್ತದೆ. ಆಗ ಸೃಷ್ಟಿಯು ಸ್ವರ್ಣಿಮಯುಗವಾಗಿಬಿಡುತ್ತದೆ. ಸತೋಪ್ರಧಾನವಾದ 5 ತತ್ವಗಳಿಂದ ಶರೀರ ಮಾಡಲ್ಪಡುತ್ತದೆ. ಆತ್ಮ

ಸತೋಪ್ರಧಾನವಾದಾಗ ಶರೀರವೂ ಸಹ ಸತೋಪ್ರಧಾನವಾಗುತ್ತದೆ. ನಂತರ ಕೊನೆಯಲ್ಲಿ ಬಂದಾಗ ಕಬ್ಬಿಣಯುಗದ ಶರೀರವು ಸಿಗುತ್ತದೆ ಏಕೆಂದರೆ ಆತ್ಮದಲ್ಲಿ ತುಕ್ಕು ಹಿಡಿದಿರುತ್ತದೆ. ಸ್ವರ್ಣಿಮಯುಗ, ಬೆಳ್ಳಿಯ ಯುಗವೆಂದು ಈ ಸೃಷ್ಟಿಗೆ ಹೇಳಲಾಗುತ್ತದೆ.

ಈಗ ಮಕ್ಕಳು ಏನು ಮಾಡಬೇಕು? ಮೊಟ್ಟಮೊದಲು ಶಾಂತಿಧಾಮಕ್ಕೆ ಹೋಗಬೇಕು, ಆದ್ದರಿಂದ ತಂದೆಯನ್ನು ನೆನಪು ಮಾಡಬೇಕು, ಆಗಲೇ ತಮೋಪ್ರಧಾನದಿಂದ ಸತೋಪ್ರಧಾನರಾಗಿಬಿಡುತ್ತೀರಿ. ಎಷ್ಟು ಸಮಯ ತಂದೆ ಇಲ್ಲಿರುತ್ತಾರೆ ಅಷ್ಟು ಸಮಯ ನೀವು ಸತೋಪ್ರಧಾನವಾಗಲು ಹಿಡಿಸುತ್ತದೆ. ತಂದೆಯು ಸ್ವರ್ಣಿಮಯುಗದಲ್ಲಿ ಜನ್ಮವನ್ನು ತೆಗೆದುಕೊಳ್ಳುವುದಿಲ್ಲ. ಆತ್ಮನಿಗೆ ಶರೀರ ದೊರೆತಾಗ ಸ್ವರ್ಣಿಮಯುಗದ ಜೀವಾತ್ಮನೆಂದು ಕರೆಯಲಾಗುತ್ತದೆ ಆದರೆ ಸ್ವರ್ಣಿಮಯುಗದ ಆತ್ಮವೆಂದು ಕರೆಯುವುದಿಲ್ಲ. ಸ್ವರ್ಣಿಮಯುಗದ ಜೀವಾತ್ಮವೇ ಮತ್ತೆ ಬೆಳ್ಳಿಯುಗದ ಜೀವಾತ್ಮವಾಗುತ್ತದೆ. ನೀವಿಲ್ಲಿ ಕುಳಿತಿದ್ದೀರೆಂದರೆ ನಿಮಗೆ ಶಾಂತಿ-ಸುಖ ಎರಡೂ ಸಹ ಪ್ರಾಪ್ತಿಯಾಗುತ್ತದೆ ಅಂದಾಗ ಏನು ಮಾಡಬೇಕು. ದುಃಖಧಾಮದ ಸನ್ಯಾಸವನ್ನು ಮಾಡಬೇಕು. ಇದಕ್ಕೆ ಬೇಹದ್ದಿನ ಸನ್ಯಾಸವೆಂದು ಕರೆಯಲಾಗುತ್ತದೆ. ಆ ಸನ್ಯಾಸಿಗಳದು ಹದ್ದಿನ ಸನ್ಯಾಸ, ಮನೆ-ಮಠವನ್ನು ಬಿಟ್ಟು ಕಾಡಿನಲ್ಲಿ ಹೋಗುತ್ತಾರೆ. ಅವರಿಗೆ ಇಡೀ ಜಗತ್ತೇ ಕಾಡಾಗಿದೆ ಎಂಬುದು ತಿಳಿದಿಲ್ಲ. ಇದು ಮುಳ್ಳಿನ ಕಾಡಾಗಿದೆ. ಇದು ಮುಳ್ಳಿನ ಪ್ರಪಂಚ, ಅದು ಹೂವಿನ ಪ್ರಪಂಚವಾಗಿರುತ್ತದೆ. ಭಲೆ ಸನ್ಯಾಸಿಗಳು ಸನ್ಯಾಸವನ್ನು ಮಾಡಿ ಇದೇ ಮುಳ್ಳಿನ ಪ್ರಪಂಚದಲ್ಲಿ, ಕಾಡಿನಲ್ಲಿ ಪಟ್ಟಣಗಳಿಂದ ದೂರ-ದೂರ ಹೋಗಿ ಇರುತ್ತಾರೆ. ಅವರದು ನಿವೃತ್ತಿ ಮಾರ್ಗವಾಗಿದೆ, ನಿಮ್ಮದು ಪ್ರವೃತ್ತಿ ಮಾರ್ಗವಾಗಿದೆ. ನೀವು ಪವಿತ್ರ ಜೋಡಿಗಳಾಗಿದ್ದೀರಿ ಈಗ ಪವಿತ್ರರಾಗಿದ್ದೀರಿ ಅವರದು ಗೃಹಸ್ಥ ಆಶ್ರಮ ಎಂದು ಕರೆಯಲಾಗುತ್ತದೆ. ಸನ್ಯಾಸಿಗಳಾದರೋ ನಂತರ ಬರುತ್ತಾರೆ. ಇಸ್ಲಾಮಿ, ಬೌದ್ಧಿಯರೂ ಸಹ ಆ ನಂತರ ಬರುತ್ತಾರೆ. ಕ್ರಿಶ್ಚಿಯನ್ನರಿಗಿಂತ ಸ್ವಲ್ಪ ಮೊದಲು ಬರುತ್ತಾರೆ. ಈ ವೃಕ್ಷವನ್ನೂ ಸಹ ನೆನಪು ಮಾಡಬೇಕು, ಚಕ್ರವನ್ನೂ ಸಹ ನೆನಪು ಮಾಡಬೇಕು. ತಂದೆಯು ಕಲ್ಪ-ಕಲ್ಪವೂ ಬಂದು ಕಲ್ಪವೃಕ್ಷದ ಜ್ಞಾನವನ್ನು ಕೊಡುತ್ತಾರೆ ಏಕೆಂದರೆ ಸ್ವಯಂ ಬೀಜರೂಪನಾಗಿದ್ದಾರೆ. ಸತ್ಯ, ಚೈತನ್ಯನಾಗಿದ್ದಾರೆ ಆದ್ದರಿಂದ ಕಲ್ಪ-ಕಲ್ಪವೂ ಬಂದು ಕಲ್ಪವೃಕ್ಷದ ಎಲ್ಲಾ ರಹಸ್ಯವನ್ನು ತಿಳಿಸುತ್ತಾರೆ. ನೀವು ಆತ್ಮರು ಆದರೆ ನಿಮಗೆ ಸುಖದ ಸಾಗರ, ಜ್ಞಾನಸಾಗರ, ಶಾಂತಿಯ ಸಾಗರ ಎಂದು ಕರೆಯುವುದಿಲ್ಲ. ಯಾರು ನಿಮ್ಮನ್ನು ಇಂತಹವರನ್ನಾಗಿ ಮಾಡುತ್ತಾರೆಯೋ ಆ ಒಬ್ಬ ತಂದೆಯ ಮಹಿಮೆಯು ಇದಾಗಿದೆ. ಈ ಮಹಿಮೆಯು ಸದಾಕಾಲಕ್ಕಾಗಿ ತಂದೆಯದೇ ಆಗಿರುತ್ತದೆ. ಸದಾಕಾಲ ಅವರು ಪವಿತ್ರನಾಗಿರುತ್ತಾರೆ ಮತ್ತು ನಿರಾಕಾರನಾಗಿದ್ದಾರೆ. ಕೇವಲ ಸ್ವಲ್ಪ ಸಮಯಕ್ಕಾಗಿ ಪಾವನರನ್ನಾಗಿ ಮಾಡಲು ಬರುತ್ತಾರೆ. ಸರ್ವವ್ಯಾಪಿಯ ಮಾತಿಲ್ಲ. ತಂದೆಯು ಸದಾಕಾಲ ಅಲ್ಲಿಯೇ ಇರುತ್ತಾರೆ ಎಂಬುದು ನಿಮಗೆ ತಿಳಿದಿದೆ. ಭಕ್ತಿಮಾರ್ಗದಲ್ಲಿ ಸದಾಕಾಲ ಅವರನ್ನೇ ನೆನಪು ಮಾಡುತ್ತಾರೆ. ಸತ್ಯಯುಗದಲ್ಲಿ ನೆನಪು ಮಾಡುವ ಅವಶ್ಯಕತೆಯಿರುವುದಿಲ್ಲ. ರಾವಣರಾಜ್ಯದಲ್ಲಿ ನಿಮ್ಮ ಚೀರಾಟ ಪ್ರಾರಂಭವಾಗುತ್ತದೆ. ಅವರೇ ಬಂದು ಸುಖ-ಶಾಂತಿಯನ್ನು ಕೊಡುತ್ತಾರೆ. ನಂತರ ಮತ್ತೆ ಅಶಾಂತಿಯಲ್ಲಿ ಅವರ ನೆನಪು ಬರುತ್ತದೆ. ತಂದೆಯು ತಿಳಿಸುತಾರೆ- ನಾನು ಪ್ರತೀ 5000 ವರ್ಷಕ್ಕೊಮ್ಮೆ ಬರುತ್ತೇನೆ. ಅರ್ಧಕಲ್ಪ ಸುಖ, ಅರ್ಧಕಲ್ಪ ದುಃಖವಿರುತ್ತದೆ. ಅರ್ಧಕಲ್ಪದ ನಂತರವೆ ರಾವಣರಾಜ್ಯವು ಪ್ರಾರಂಭವಾಗುತ್ತದೆ. ಇದಕ್ಕೆ ಮೊದಲನೇ ಕಾರಣವಾಗಿದೆ- ದೇಹಾಭಿಮಾನ, ಅದರ ನಂತರ ಬೇರೆ-ಬೇರೆ ವಿಕಾರಗಳು ಬರುತ್ತವೆ. ಈಗ ತಂದೆಯು ತನ್ನನ್ನು ಆತ್ಮನೆಂದು ತಿಳಿಯಿರಿ, ದೇಹೀ-ಅಭಿಮಾನಿ ಆಗಿ ಎಂದು ತಿಳಿಸುತ್ತಾರೆ. ಆತ್ಮನ ಪರಿಚಯ ಆಗಬೇಕಾಗಿದೆ. ಮನುಷ್ಯರು ಕೇವಲ ಭೃಕುಟಿಯ ಮಧ್ಯದಲ್ಲಿ ಆತ್ಮವು ಹೊಳೆಯುತ್ತಿದೆ ಎಂದು ಹೇಳುತ್ತಾರೆ. ಆತ್ಮವು ಅಕಾಲಮೂರ್ತಿಯಾಗಿದೆ, ಆತ್ಮನ ಸಿಂಹಾಸನವು ಈ ಶರೀರವಾಗಿದೆ ಎಂಬುದನ್ನು ಈಗ ನೀವು ತಿಳಿದಿದ್ದೀರಿ. ಆತ್ಮವು ಭೃಕುಟಿಯಲ್ಲಿ ಕುಳಿತುಕೊಳ್ಳುತ್ತದೆ. ಅಕಾಲಮೂರ್ತಿಯ ಸಿಂಹಾಸನ, ಚೈತನ್ಯ ಅಕಾಲ ಸಿಂಹಾಸನವಾಗಿದೆ, ಅಮೃತಸರದಲ್ಲಿರುವ ಕಟ್ಟಿಗೆಯಿಂದ ಮಾಡಿರುವ ಸಿಂಹಾಸನ ಅಕಾಲ ಸಿಂಹಾಸನವಲ್ಲ. ಯಾರೆಲ್ಲಾ ಮನುಷ್ಯರಿದ್ದಾರೆ ಎಲ್ಲರಿಗೂ ತಮ್ಮ-ತಮ್ಮದೇ ಆದ ಅಕಾಲ ಸಿಂಹಾಸನವಿದೆ (ಶರೀರ) ಎಂದು ತಂದೆಯು ತಿಳಿಸುತ್ತಾರೆ. ಅಂದಾಗ ಎಷ್ಟೊಂದು ಅಕಾಲ ಸಿಂಹಾಸನಗಳಾದವು. ಯಾರೆಲ್ಲಾ ಮನುಷ್ಯ ಮಾತ್ರರಿದ್ದಾರೆ ಅಕಾಲನಾದ ಆತ್ಮನ ಸಿಂಹಾಸನವಾಗಿದೆ. ಆತ್ಮವು ಒಂದು ಸಿಂಹಾಸನವನ್ನು ಬಿಟ್ಟು ತಕ್ಷಣ ಮತ್ತೊಂದನ್ನು ತೆಗೆದುಕೊಳ್ಳುತ್ತದೆ. ಮೊದಲು ಚಿಕ್ಕಸಿಂಹಾಸನವಿರುತ್ತದೆ ನಂತರ ದೊಡ್ಡದಾಗುತ್ತಾ ಹೋಗುತ್ತದೆ. ಈ ಶರೀರ ರೂಪಿ ಸಿಂಹಾಸನ ಚಿಕ್ಕದು, ದೊಡ್ಡದು ಆಗುತ್ತದೆ. ಸಿಖ್ಖರು ಯಾವುದನ್ನು ಅಕಾಲ ಸಿಂಹಾಸನವೆಂದು ಹೇಳುತ್ತಾರೆ ಅದು ಚಿಕ್ಕದು-ದೊಡ್ಡದು ಆಗುವುದಿಲ್ಲ. ಎಲ್ಲಾ ಮನುಷ್ಯರ ಅಕಾಲ ಸಿಂಹಾಸನ ಈ ಭೃಕುಟಿಯಾಗಿದೆ ಎಂಬುದು ಯಾರಿಗೂ ತಿಳಿದಿಲ್ಲ. ಆತ್ಮವು ಅಕಾಲವಾಗಿದೆ ಅದು ಎಂದೂ ಸಹ ವಿನಾಶವಾಗುವುದಿಲ್ಲ. ಆತ್ಮನಿಗೆ ಭಿನ್ನ-ಭಿನ್ನವಾದ ಸಿಂಹಾಸನ ಸಿಗುತ್ತದೆ. ಸತ್ಯಯುಗದಲ್ಲಿ ನಿಮಗೆ ದೊಡ್ಡ ಫಸ್ಟ್ಕ್ಲಾಸ್ ಸಿಂಹಾಸನ ಸಿಗುತ್ತದೆ ಅದಕ್ಕೆ ಸ್ವರ್ಣಿಮಯುಗದ ಸಿಂಹಾಸನವೆಂದು ಕರೆಯಲಾಗುತ್ತದೆ. ನಂತರ ಆ ಆತ್ಮನಿಗೆ ಬೆಳ್ಳಿ, ತಾಮ್ರ, ಕಬ್ಬಿಣದ ಸಿಂಹಾಸನ ಸಿಗುತ್ತದೆ ಮತ್ತೆ ಸ್ವರ್ಣಿಮಯುಗದಲ್ಲಿ ಸಿಂಹಾಸನ ಬೇಕೆಂದರೆ ಅವಶ್ಯವಾಗಿ ಪಾವನರಾಗಬೇಕಾಗುತ್ತದೆ ಆದ್ದರಿಂದ ತಂದೆಯು ನನ್ನೊಬ್ಬನನ್ನೇ ನೆನಪು ಮಾಡಿದ್ದೇ ಆದರೆ ನಿಮ್ಮ ತುಕ್ಕು ಎಲ್ಲವೂ ಬಿಟ್ಟುಹೋಗುತ್ತದೆ ಎಂದು ತಿಳಿಸುತ್ತಾರೆ. ನಂತರ ನಿಮಗೆ ಇಂತಹ ದೈವೀ ಸಿಂಹಾಸನ ಸಿಗುತ್ತದೆ. ಈಗ ಬ್ರಾಹ್ಮಣಕುಲದ ಸಿಂಹಾಸನವಿದೆ. ಪುರುಷೋತ್ತಮ ಸಂಗಮಯುಗದ ಸಿಂಹಾಸನ ನಂತರ ಆತ್ಮನಿಗೆ ದೇವತಾ ಸಿಂಹಾಸನ ಸಿಗುತ್ತದೆ. ಈ ಮಾತುಗಳು ಪ್ರಪಂಚದ ಮನುಷ್ಯರಿಗೆ ತಿಳಿದಿಲ್ಲ. ದೇಹಾಭಿಮಾನದಲ್ಲಿ ಬಂದ ನಂತರ ಒಬ್ಬರಿಗೊಬ್ಬರು ದುಃಖವನ್ನು ಕೊಡುತ್ತಿರುತ್ತಾರೆ ಆದ್ದರಿಂದ ಇದನ್ನು ದುಃಖಧಾಮವೆಂದು ಕರೆಯಲಾಗುತ್ತದೆ. ತಂದೆಯು ತಿಳಿಸುತ್ತಾರೆ- ನಿಮ್ಮ ಮೂಲತಃ ನಿವಾಸ ಸ್ಥಾನ ಶಾಂತಿಧಾಮವಾಗಿದೆ ಈಗ ನೀವು ಆ ಶಾಂತಿಧಾಮವನ್ನೂ ನೆನಪು

ಮಾಡಿ ಎಂದು. ಸುಖಧಾಮವನ್ನು ನೆನಪು ಮಾಡಿ, ಇದನ್ನು ಮರೆಯುತ್ತಾ ಹೋಗಿ, ಇದರಲ್ಲಿ ವೈರಾಗ್ಯವಿದೆ. ಸನ್ಯಾಸಿಗಳ ರೀತಿ ಮನೆ-ಮಠವನ್ನು ಬಿಡಬೇಕೆಂದಲ್ಲ. ಇಲ್ಲಿ ಒಂದುಕಡೆ ಒಳ್ಳೆಯದಿದೆ ಮತ್ತೊಂದುಕಡೆ ಕೆಟ್ಟದ್ದಿದೆ. ಅವರು ಹಠಯೋಗ ಒಳ್ಳೆಯದೂ ಇದೆ, ಕೆಟ್ಟದ್ದೂ ಸಹ ಇದೆ ಏಕೆಂದರೆ ದೇವತೆಗಳು ಯಾವಾಗ ವಾಮಮಾರ್ಗದಲ್ಲಿ ಹೋಗುತ್ತಾರೋ ಆಗ ಭಾರತವನ್ನು ರಕ್ಷಣೆ ಮಾಡಲು ಪವಿತ್ರತೆ ಬಹಳ ಅವಶ್ಯಕತೆಯಿದೆ. ಅದರಲ್ಲಿಯೂ ಸಹ ಸನ್ಯಾಸಿಗಳು ಸಹಯೋಗವನ್ನು ಕೊಡುತ್ತಾರೆ. ಭಾರತವೇ ಅವಿನಾಶಿ ಖಂಡವಾಗಿದೆ, ತಂದೆಯು ಇಲ್ಲಿಯೇ ಬರಬೇಕಾಗುತ್ತದೆ. ಎಲ್ಲಿ ಬೇಹದ್ದಿನ ತಂದೆಯು ಬರುತ್ತಾರೆ ಅದು ಎಲ್ಲದಕ್ಕಿಂತ ದೊಡ್ಡ ತೀರ್ಥಸ್ಥಾನವಾಯಿತಲ್ಲವೆ. ಸರ್ವರ ಸದ್ಗತಿಯನ್ನು ತಂದೆಯೇ ಬಂದು ನೀಡುತ್ತಾರೆ ಆದ್ದರಿಂದ ಭಾರತವೇ ಶ್ರೇಷ್ಠಾತಿಶ್ರೇಷ್ಠ ದೇಶವಾಗಿದೆ. ಮೂಲ ಮಾತನ್ನೂ ತಂದೆಯು ತಿಳಿಸುತ್ತಾರೆ- ಮಕ್ಕಳೇ, ನೆನಪಿನ ಯಾತ್ರೆಯಲ್ಲಿ ಇರಿ. ಗೀತೆಯಲ್ಲಿ ಮನ್ಮನಾಭವ ಎಂಬ ಅಕ್ಷರವಿದೆ ಆದರೆ ತಂದೆಯು ಯಾವುದೇ ಸಂಸ್ಕೃತದಲ್ಲಿ ತಿಳಿಸುವುದಿಲ್ಲ. ತಂದೆಯು ಮನ್ಮನಾಭದ ಅರ್ಥವನ್ನು ತಿಳಿಸಿಕೊಡುತ್ತಾರೆ. ದೇಹದ ಎಲ್ಲಾ ಧರ್ಮವನ್ನು ಬಿಟ್ಟು ತನ್ನನ್ನು ಆತ್ಮನೆಂದು ನಿಶ್ಚಯ ಮಾಡಿಕೊಳ್ಳಿ. ಆತ್ಮವು ಅವಿನಾಶಿಯಾಗಿದೆ ಅದು ಎಂದೂ ಚಿಕ್ಕದು, ದೊಡ್ಡದು ಆಗುವುದಿಲ್ಲ. ಅದರಲ್ಲಿ ಅನಾದಿ-ಅವಿನಾಶಿ ಪಾತ್ರವು ತುಂಬಲ್ಪಟ್ಟಿದೆ. ಈ ನಾಟಕ ಮಾಡಲ್ಪಟ್ಟಿದೆ. ಕೊನೆಯಲ್ಲಿ ಬರುವಂತಹ ಆತ್ಮಗಳದು ಬಹಳ ಸ್ವಲ್ಪ ಪಾತ್ರವಿರುತ್ತದೆ. ಉಳಿದೆಲ್ಲಾ ಸಮಯ ಶಾಂತಿಧಾಮದಲ್ಲಿ ಇರುತ್ತಾರೆ. ಸ್ವರ್ಗದಲ್ಲಿ ಬರಲು ಸಾಧ್ಯವಿಲ್ಲ. ಕೊನೆಯಲ್ಲಿ ಬರುವಂತಹವರು ಅಲ್ಲಿಯೇ ಸ್ವಲ್ಪ ಸುಖ, ಅಲ್ಲಿಯೇ ಸ್ವಲ್ಪ ದುಃಖವನ್ನು ನೋಡುತ್ತಾರೆ. ಹೇಗೆ ದೀಪಾವಳಿಯಲ್ಲಿ ದೀಪದ ಹುಳುಗಳು ಎಷ್ಟೊಂದು ಹುಟ್ಟಿಕೊಳ್ಳುತ್ತವೆ. ಬೆಳಗ್ಗೆ ಎದ್ದು ನೋಡಿದಾಗ ಎಲ್ಲವೂ ಸತ್ತು ಬಿದ್ದಿರುತ್ತವೆ ಹಾಗೆಯೇ ಕೊನೆಯಲ್ಲಿ ಬರುವಂತಹ ಮನುಷ್ಯರ ಪಾತ್ರವೂ ಹೀಗೆ ಇರುತ್ತದೆ ಅದಕ್ಕೆ ಏನು ಬೆಲೆಯಿರುತ್ತದೆ. ಪ್ರಾಣಿಗಳ ರೀತಿ ಇರುತ್ತದೆ. ಸೃಷ್ಟಿಚಕ್ರ ಹೇಗೆ ಸುತ್ತುತ್ತದೆ ಎಂಬುದನ್ನು ತಂದೆಯು ತಿಳಿಸುತ್ತಾರೆ. ಮನುಷ್ಯ ಸೃಷ್ಟಿರೂಪಿ ವೃಕ್ಷ ಚಿಕ್ಕದಿಂದ ದೊಡ್ಡದು ಹೇಗೆ ಆಗುತ್ತದೆ, ಸತ್ಯಯುಗದಲ್ಲಿ ಎಷ್ಟು ಕಡಿಮೆ ಮನುಷ್ಯರಿರುತ್ತಾರೆ, ಕಲಿಯುಗದಲ್ಲಿ ಎಷ್ಟು ವೃದ್ಧಿಯನ್ನು ಹೊಂದುತ್ತಾರೆ. ವೃಕ್ಷ ವಿಸ್ತಾರವಾಗುತ್ತದೆ. ಮುಖ್ಯವಾದ ಮಾತನ್ನು ತಂದೆಯು ತಿಳಿಸಿದ್ದಾರೆ, ಗೃಹಸ್ಥ ವ್ಯವಹಾರದಲ್ಲಿರುತ್ತಾ ನನ್ನೊಬ್ಬನನ್ನೇ ನೆನಪು ಮಾಡಿ ಎಂಬ ಮುಖ್ಯಮಾತನ್ನು ತಂದೆಯು ತಿಳಿಸಿದ್ದಾರೆ. 8 ಗಂಟೆ ನೆನಪಿನಲ್ಲಿರುವ ಅಭ್ಯಾಸ ಮಾಡಿ ನೆನಪನ್ನು ಮಾಡುತ್ತಾ-ಮಾಡುತ್ತಾ ಕೊನೆಗೆ ಪವಿತ್ರರಾಗಿ ತಂದೆಯ ಬಳಿ ಹೊರಟುಹೋಗುತ್ತೀರೆಂದರೆ ಸ್ಕಾಲರ್ಶಿಪ್ (ವಿದ್ಯಾರ್ಥಿವೇತನವು) ಸಿಗುತ್ತದೆ. ಒಂದುವೇಳೆ ಪಾಪ ಹಾಗೆಯೇ ಉಳಿದುಬಿಟ್ಟರೆ ಜನ್ಮವನ್ನು ತೆಗೆದುಕೊಳ್ಳಬೇಕಾಗುತ್ತದೆ. ಶಿಕ್ಷೆಯನ್ನು ಭೋಗಿಸಬೇಕಾಗುತ್ತದೆ ಅಲ್ಲದೆ ಪದವಿಯೂ ಸಹ ಕಡಿಮೆಯಾಗುತ್ತದೆ. ಲೆಕ್ಕಾಚಾರವನ್ನು ಎಲ್ಲರೂ ಸಮಾಪ್ತಿ ಮಾಡಿಕೊಳ್ಳಬೇಕು. ಯಾರೆಲ್ಲಾ ಮನುಷ್ಯ ಮಾತ್ರರಿದ್ದಾರೆ ಇದುವರೆವಿಗೂ ಸಹ ಜನ್ಮವನ್ನು ತೆಗೆದುಕೊಳ್ಳುತ್ತಾ ಇರುತ್ತಾರೆ. ಈ ಸಮಯದಲ್ಲಿ ನೋಡಿದಾಗ ಭಾರತವಾಸಿಗಳಿಗಿಂತಲೂ ಕ್ರಿಶ್ಚಿಯನ್ನರ ಸಂಖ್ಯೆಯು ಜಾಸ್ತಿಯಿದೆ, ಅಲ್ಲದೆ ಅವರು ಬುದ್ಧಿವಂತರೂ ಸಹ ಇದ್ದಾರೆ. ಭಾರತವಾಸಿಗಳು 100 ಬುದ್ಧಿವಂತರಾಗಿದ್ದರು. ಈಗ ಬುದ್ಧಿಹೀನರಾಗಿಬಿಟ್ಟಿದ್ದಾರೆ, ಇವರೇ 100% ಸುಖವನ್ನು ಪಡೆಯುತ್ತಾರೆ ಮತ್ತೆ 100% ದುಃಖವನ್ನೂ ಸಹ ಇಲ್ಲಿಯೇ ಪಡೆಯುತ್ತಾರೆ. ಕ್ರಿಶ್ಚಿಯನ್ನರು ಕೊನೆಯಲ್ಲಿ ಬರುತ್ತಾರೆ.

ಕ್ರಿಶ್ಚಿಯನ್ನರ ರಾಜಧಾನಿ, ಕೃಷ್ಣನ ರಾಜಧಾನಿಗೆ ಪರಸ್ಪರ ಸಂಬಂಧವಿದೆ. ಕ್ರಿಶ್ಚಿಯನ್ನರು ರಾಜ್ಯವನ್ನು ಕಸಿದುಕೊಂಡರು ಮತ್ತೆ ಅದೇ ಕ್ರಿಶ್ಚಿಯನ್ನರಿಂದಲೇ ರಾಜ್ಯ ಮತ್ತೆ ಸಿಗುತ್ತದೆ. ಈ ಸಮಯದಲ್ಲಿ ಕ್ರಿಶ್ಚಿಯನ್ನರ ಪ್ರಭಾವವಿದೆ, ಅವರಿಗೆ ಭಾರತದಿಂದಲೇ ಸಹಾಯ ಸಿಗುತ್ತಿದೆ. ಈಗ ಭಾರತ ಹಸಿವಿನಿಂದ ಸಾಯುತ್ತಿದೆ ಅದಕ್ಕೆ ಅವರ ವತಿಯಿಂದ ಸೇವೆ ನಡೆಯುತ್ತಾ ಇದೆ. ಇಲ್ಲಿಂದ ಬಹಳಷ್ಟು ಸಂಪತ್ತು, ಬಹಳಷ್ಟು ವಜ್ರ-ರತ್ನ ಮುಂತಾದವುಗಳನ್ನು ತೆಗೆದುಕೊಂಡು ಹೋಗಿದ್ದಾರೆ. ಬಹಳಷ್ಟು ಹಣವಂತರಾಗಿದ್ದಾರೆ ಮತ್ತೆ ಆ ಹಣವನ್ನು ಹಿಂತಿರುಗಿಸಿ ಕೊಡುತ್ತಿದ್ದಾರೆ. ಮತ್ತೆ ಅದು ಅವರಿಗೆ ಸಿಗುವುದೇ ಇಲ್ಲ. ಈಗ ನೀವು ಮಕ್ಕಳನ್ನು ಯಾರೂ ಗುರುತಿಸುವುದಿಲ್ಲ. ಒಂದುವೇಳೆ ಗುರುತಿಸಿದ್ದೇ ಆದರೆ ಬಂದು ಸಲಹೆಯನ್ನು ತೆಗೆದುಕೊಳ್ಳುತ್ತಿದ್ದರು. ನೀವು ಈಶ್ವರೀಯ ಸಂಪ್ರದಾಯದವರು, ಈಶ್ವರೀಯ ಸಲಹೆಯಂತೆ ನಡೆಯುತ್ತಿದ್ದೀರಿ. ನೀವೇ ಮತ್ತೆ ದೈವೀ ಸಂಪ್ರದಾಯದವರಾಗುತ್ತೀರಿ. ಮತ್ತೆ ಕ್ಷತ್ರಿಯ, ವೈಶ್ಯ, ಶೂದ್ರ ಸಂಪ್ರದಾಯದವರಾಗುತ್ತೀರಿ. ಈಗ ನಾವೇ ಬ್ರಾಹ್ಮಣರು, ನಾವೇ ದೇವತೆ, ನಾವೇ ಕ್ಷತ್ರಿಯರು..... ನಾವೇ ಅದು ಎಂಬುದರ ಅರ್ಥ ಎಷ್ಟು ಚೆನ್ನಾಗಿದೆ. ಇದು ಬಾಜೋಲಿಯ (ಪಲ್ಟಿ) ಆಟವಾಗಿದೆ. ಇದನ್ನು ತಿಳಿದುಕೊಳ್ಳುವುದು ಬಹಳ ಸಹಜವಾಗಿದೆ ಆದರೆ ಮಾಯೆಯು ಮರೆಸಿಬಿಡುತ್ತದೆ ಮತ್ತೆ ದೈವೀಗುಣಗಳಿಂದ ಆಸುರೀಗುಣದಲ್ಲಿ ಕರೆದುಕೊಂಡು ಬರುತ್ತದೆ. ಅಪವಿತ್ರರಾಗುವುದು ಆಸುರೀಗುಣವಲ್ಲವೆ. ಒಳ್ಳೆಯದು.

ಮಧುರಾತಿ ಮಧುರ ಅಗಲಿ ಮರಳಿ ಸಿಕ್ಕಿರುವಂತಹ ಮಕ್ಕಳಿಗೆ ಪ್ರೀತಿಯ ಮಾತಾ-ಪಿತ ಬಾಪ್ದಾದಾರವರ ನೆನಪು ಪ್ರೀತಿ ಹಾಗೂ ಸುಪ್ರಭಾತ. ಆತ್ಮೀಯ ಮಕ್ಕಳಿಗೆ ಆತ್ಮೀಯ ತಂದೆಯ ನಮಸ್ತೆ.

ಧಾರಣೆಗಾಗಿ ಮುಖ್ಯಸಾರ:

1. ವಿದ್ಯಾರ್ಥಿವೇತನವನ್ನು ತೆಗೆದುಕೊಳ್ಳಲು ಗೃಹಸ್ಥ ವ್ಯವಹಾರದಲ್ಲಿರುತ್ತಾ ಕೊನೆಪಕ್ಷ 8 ಗಂಟೆಯಾದರೂ ತಂದೆಯನ್ನು ನೆನಪು ಮಾಡಬೇಕು. ನೆನಪಿನ ಅಭ್ಯಾಸದಿಂದಲೇ ಪಾಪ ತುಂಡಾಗುತ್ತದೆ ಮತ್ತು ಸ್ವರ್ಣಿಮಯುಗದ ಸಿಂಹಾಸನ ದೊರೆಯುತ್ತದೆ.

2. ಈ ದುಃಖಧಾಮದಿಂದ ಬೇಹದ್ದಿನ ವೈರಾಗಿಗಳಾಗಿ ತನ್ನ ಮೂಲನಿವಾಸ ಸ್ಥಾನ ಶಾಂತಿಧಾಮ ಮತ್ತು ಸುಖಧಾಮವನ್ನು ನೆನಪು ಮಾಡಬೇಕು. ದೇಹಾಭಿಮಾನದಲ್ಲಿ ಬಂದು ಯಾರಿಗೂ ದುಃಖವನ್ನು ಕೊಡಬಾರದು.

ವರದಾನ: ಕರ್ಮಗಳ ಲೆಕ್ಕಾಚಾರವನ್ನು ತಿಳಿದುಕೊಂಡು ತಮ್ಮ ಅಚಲ ಸ್ಥಿತಿ ಮಾಡಿಕೊಳ್ಳುವಂತಹ ಸಹಜಯೋಗಿ ಭವ
ನಡೆಯುತ್ತಾ-ನಡೆಯುತ್ತಾ ಒಂದುವೇಳೆ ಯಾವುದೇ ಲೆಕ್ಕಾಚಾರ ಎದುರಿಗೆ ಬಂದಾಗ ಅದರಲ್ಲಿ ಮನಸ್ಸನ್ನು ಅಲುಗಾಡಿಸಬೇಡಿ, ಸ್ಥಿತಿಯನ್ನು ಮೇಲೆ ಕೆಳಗೆ ಮಾಡಿಕೊಳ್ಳಬೇಡಿ. ಒಂದುವೇಳೆ ಅದು ಬಂದರೆ ಅದನ್ನು ಗುರುತಿಸಿ ದೂರದಿಂದಲೇ ಸಮಾಪ್ತಿ ಮಾಡಿಬಿಡಿ. ಈಗ ಯೋಧ ಆಗಬೇಡಿ. ಸರ್ವ ಶಕ್ತಿವಂತ ತಂದೆ ಜೊತೆಯಲ್ಲಿದ್ದಾಗ ಮಾಯೆ ಅಲುಗಾಡಿಸಲು ಸಾಧ್ಯವಿಲ್ಲ. ಕೇವಲ ನಿಶ್ಚಯದ ಅಡಿಪಾಯವನ್ನು ಕಾರ್ಯರೂಪದಲ್ಲಿ ತನ್ನಿ ಮತ್ತು ಸಮಯದಲ್ಲಿ ಉಪಯೋಗಿಸಿ ಆಗ ಸಹಜಯೋಗಿಗಳಾಗಿಬಿಡುವಿರಿ. ಈಗ ನಿರಂತರ ಯೋಗಿಗಳಾಗಿ, ಯುದ್ಧ ಮಾಡುವಂತಹ ಯೋಧ ಅಲ್ಲ.

ಸ್ಲೋಗನ್: ಡಬಲ್ ಲೈಟ್ ಆಗಿರಬೇಕಾದರೆ ತಮ್ಮ ಸರ್ವ ಜವಾಬ್ದಾರಿಗಳ ಹೊರೆಯನ್ನು ತಂದೆಗೆ ಒಪ್ಪಿಸಿಬಿಡಿ.